# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 39

**ಸ್ವಾಮಿ ನಿತ್ಯಸ್ಥಾನಂದ**

### ‘ನಾನು ನನ್ನದು’

**ಶ್ರೀರಾಮಕೃಷ್ಣರು** *(ಮಾರ್ವಾಡಿ ಭಕ್ತರಿಗೆ)* : ‘‘ನೋಡಿ, ‘ನಾನು, ನನ್ನದು’ ಎಂಬುದೇ ಅಜ್ಞಾನ. ಆದರೆ, ‘ಹೇ ಭಗವಂತ, ನೀನೇ ಕರ್ತ; ಎಲ್ಲವೂ ನಿನಗೆ ಸೇರಿದವೇ’ ಎಂದು ಭಾವಿಸುವುದೇ ಜ್ಞಾನದ ಚಿಹ್ನೆ. ಜೊತೆಗೆ ‘ನನ್ನದು’ ಎಂದು ಹೇಳುವ ಬಗೆ ಹೇಗೆ? ತೋಟದ ಸೂಪರಿಂಟೆಂಡೆಂಟ್ ಹೇಳುತ್ತಾನೆ: ‘ಇದು ನಮ್ಮ ತೋಟ.’ ಆದರೆ ಆತನ ಯಾವುದೋ ಒಂದು ತಪ್ಪಿಗಾಗಿ ಆತನನ್ನು ತೋಟದ ಯಜಮಾನ ವಜ ಮಾಡಿಬಿಟ್ಟಿದ್ದೇ ಆದರೆ ಆಗ ಆತ ತನ್ನ ಮಾವಿನ ಮರದ ಪೆಟ್ಟಿಗೆಯನ್ನು ಹೊರಕ್ಕೆ ತೆಗೆದುಕೊಂಡು ಹೋಗುವುದಕ್ಕೂ ಸಾಹಸ ಪಡಲಾರದವನಾಗಿ ಬಿಡುತ್ತಾನೆ.’’ *(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು. ೧೧೮)*

**ಮಮೇತಿ ಬಧ್ಯತೇ ಜಂತುಃ ನ ಮಮೇತಿ ವಿಮುಚ್ಯತೇ ।**

‘‘ನಾನು, ನನ್ನದು ಎಂಬುದೇ ಮನುಷ್ಯನನ್ನು ಬಂಧಿಸುತ್ತದೆ, ‘ನಾನಲ್ಲ, ನನ್ನದಲ್ಲ’ ಎಂಬುದು ಅವನನ್ನು ಮುಕ್ತನಾಗಿಸುತ್ತದೆ’’ ಎಂದು ಅಷ್ಟಾವಕ್ರಗೀತೆ ಹೇಳುತ್ತದೆ.

ಯಾವುದೇ ವಸ್ತು ಅಥವಾ ವ್ಯಕ್ತಿಯ ವಿಷಯದಲ್ಲಿ ‘ನನ್ನದು’ ಎಂದು ಭಾವಿಸಿದರೆ, ಅದನ್ನು ಕಳೆದುಕೊಳ್ಳುವ ಭಯವಿರುತ್ತದೆ, ರಕ್ಷಿಸಿಕೊಳ್ಳುವ ಕಾತರತೆ ಇರುತ್ತದೆ.

ಒಂದು ಯಂತ್ರವು ಕೆಲಸ ಮಾಡುತ್ತದೆ, ಅದು ಕೆಲಸ ಮಾಡಲು ವಿದ್ಯುತ್‌ಶಕ್ತಿ ಬೇಕೇಬೇಕು. ಇಲ್ಲಿ ಕರ್ತೃತ್ವ ಯಂತ್ರಕ್ಕೋ, ವಿದ್ಯುತ್ತಿಗೊ? ಯಂತ್ರ ಯಾರಿಗೆ ಸೇರಿದ್ದೋ ಅವರಿಗೆ – ಇಲ್ಲಿ ಅವರ ಇಚ್ಛೆ ಕೆಲಸ ಮಾಡುತ್ತಿದೆ. ಹಾಗೆಯೇ ಎಲ್ಲವೂ ಅವನಿಗೇ ಸೇರಿದವು. ಇಬ್ಬರು ಹುಡುಗರು ಮಾವಿನ ಮರಕ್ಕೆ ಕಲ್ಲನ್ನು ಎಸೆದರು. ಒಂದು ಮಾವಿನ ಹಣ್ಣು ಬಿತ್ತು. ಮಾವಿನ ಹಣ್ಣು ತನಗೆ ಸೇರಿದ್ದು ಎಂದು ಈಗ ಅವರಿಬ್ಬರಲ್ಲಿ ಜಗಳ. ಅಲ್ಲಿಯೇ ನಿಂತಿದ್ದ ಒಂದು ಹೆಣ್ಣು ಮಗು, ‘‘ಮಾವಿನ ಹಣ್ಣು ಮರಕ್ಕೆ ಸೇರಿದ್ದು’’ ಎಂದು ತೀರ್ಪು ನೀಡಿದಳು. ಹೀಗೆಯೇ ಎಲ್ಲವೂ ಭಗವಂತನಿಗೆ ಸೇರಿದ್ದು.

**ಶ್ರೀರಾಮಕೃಷ್ಣರು** *(ಮಾರ್ವಾಡಿ ವ್ಯಾಪಾರಿಗಳಿಗೆ)*: ‘‘ಸತ್ಯ ಪಥಾವಲಂಬಿಯಾದರೆ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು. ಯಾವಾಗಲೂ ಆತನ ನಾಮವನ್ನು ಜಪಿಸುತ್ತಿರಬೇಕು. ಕೆಲಸದ ಸಮಯದಲ್ಲಿ ಕೂಡ ಮನಸ್ಸನ್ನು ಆತನ ಅಡಿದಾವರೆಯಲ್ಲಿ ನೆಲೆಸಿರುವಂತೆ ಮಾಡಬೇಕು. ಉದಾಹರಣೆಗೆ, ಒಬ್ಬನಿಗೆ ಬೆನ್ನಫಣಿ ಎದ್ದಿದೆ ಎಂದಿಟ್ಟುಕೊಳ್ಳಿ. ಆತ ಎಲ್ಲ ಕೆಲಸವನ್ನೂ ಮಾಡುತ್ತಾನೆ, ಆದರೆ ಆತನ ಮನಸ್ಸು ಮಾತ್ರ ಸರ್ವದಾ ಬೆನ್ನಫಣಿಯ ಮೇಲೆಯೇ ನೆಲೆಸಿರುತ್ತದೆ. ರಾಮನಾಮವನ್ನು ಜಪಿಸುವುದು ಬಹಳ ಒಳ್ಳೆಯದು. ‘ಯಾವ ರಾಮ ದಶರಥನ ಪುತ್ರನೊ, ಆತನೇ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಮತ್ತೆ ಆತ ಸರ್ವಭೂತಗಳಲ್ಲೂ ಇದ್ದಾನೆ. ಆತ ನಮಗೆ ಅತ್ಯಂತ ಸಮೀಪದಲ್ಲಿದ್ದಾನೆ, ಒಳಗೂ ಇದ್ದಾನೆ, ಹೊರಗೂ ಇದ್ದಾನೆ.’’ *(ಅಲ್ಲೇ, ಪು. ೧೧೯)*



### ಅಧ್ಯಾಯ ೭

## ಶ್ರೀರಾಮಕೃಷ್ಣರು ಮತ್ತು ವಿಜಯ ಗೋಸ್ವಾಮಿ

ಶ್ರೀರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರದಲ್ಲಿ ತಮ್ಮ ಹಾಸಿಗೆಯ ಮೇಲೆ ಕುಳಿತಿದ್ದಾರೆ. ವಿಜಯ ಮೊದಲಾದ ಭಕ್ತರು ಎದುರಿಗೆ ನೆಲದ ಮೇಲೆ ಕುಳಿತುಕೊಂಡಿದ್ದಾರೆ. ವಿಜಯ ಸಾಧಾರಣ ಬ್ರಹ್ಮಸಮಾಜಕ್ಕೆ ಸೇರಿದವನು. ಚೈತನ್ಯ ಮಹಾಪ್ರಭುವಿನ ನಿಕಟ ಅನುಯಾಯಿಗಳಾದ ಅದ್ವೈತ ಗೋಸ್ವಾಮಿಗಳ ವಂಶಕ್ಕೆ ಸೇರಿದವನಾದ ವಿಜಯನಲ್ಲಿ ಸ್ವಾಭಾವಿಕವಾಗಿಯೇ ಭಕ್ತಿಭಾವವು ಅಂತರ್ಹಿತವಾಗಿತ್ತು, ಮತ್ತು ಅದು ಸೂಕ್ತ ಅಭಿವ್ಯಕ್ತಿಗಾಗಿ ಕಾದು



ವಿಜಯಕೃಷ್ಣ ಗೋಸ್ವಾಮಿ

ಕೊಂಡಿತ್ತು. ಶ್ರೀರಾಮಕೃಷ್ಣರೊಡನೆ ಒಡನಾಟ ಆ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಅವರ ಬಾಯಿಂದ ಬರುವುದೆಲ್ಲವೂ ಅಮೃತಧಾರೆಯೇ ಎಂಬುದು ಆತನ ಧೋರಣೆ.

### ಆತ್ಮಹತ್ಯೆಯನ್ನು ಕುರಿತು

ಏಡೇದೇರ್ ಗ್ರಾಮದ ವಿಷ್ಣು ಎಂಬ ಹುಡುಗ ಆತ್ಮಹತ್ಯೆ ಮಾಡಿಕೊಂಡ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ:

''ಆ ಹುಡುಗ ಆತ್ಮಹತ್ಯೆ ಮಾಡಿಕೊಂಡುಬಿಟ್ಟಿದ್ದನ್ನು ಕೇಳಿ ನನ್ನ ಮನಸ್ಸು ಕೆಟ್ಟುಹೋಗಿಬಿಟ್ಟಿದೆ. ಸ್ಕೂಲಿನಲ್ಲಿ ಓದುತ್ತಿದ್ದ. ಆಗಾಗ ಇಲ್ಲಿಗೆ ಬರುತ್ತಿದ್ದ, ಮತ್ತು ಹೇಳುತ್ತಿದ್ದ, ಸಂಸಾರ ತನಗೆ ರುಚಿಸುತ್ತಿಲ್ಲ ಎಂಬುದಾಗಿ. ಒಮ್ಮೆ ಪಶ್ಚಿಮ ಪ್ರಾಂತಕ್ಕೆ ಹೋಗಿ ಅಲ್ಲಿ ಕೆಲವು ದಿನವನ್ನು ತನ್ನ ಸಂಬಂಧಿಗಳೊಡನೆ ಕಳೆದ. ಅಲ್ಲಿ ಹುಲ್ಲುಗಾವಲು, ಕಾಡು, ಬೆಟ್ಟ ಇವುಗಳ ಕಡೆಗೆ ಹೋಗಿ ಏಕಾಂತದಲ್ಲಿ ಧ್ಯಾನಮಾಡುತ್ತಿದ್ದ. ತನಗೆ ಅನೇಕ ಬಾರಿ ಭಗವದ್‌ರೂಪದರ್ಶನ ಆಗಿದೆ ಎಂಬುದಾಗಿ ಒಮ್ಮೆ ನನಗೆ ತಿಳಿಸಿದ್ದ.

''ಬಹುಶಃ ಇದು ಆತನ ಕೊನೆಯ ಜನ್ಮ ಆಗಿರಬೇಕು. ಹಿಂದಿನ ಜನ್ಮದಲ್ಲಿ ಆತ ಬಹಳವಾಗಿ ಸಾಧನೆ ಮಾಡಿದ್ದ ಹಾಗೆ ಕಾಣುತ್ತದೆ. ಎಲ್ಲೋ ಸ್ವಲ್ಪ ಬಾಕಿ ಉಳಿದುಕೊಂಡಿದ್ದಿರಬೇಕು. ಅದು ಈ ಜನ್ಮದಲ್ಲಿ ಮುಗಿದುಹೋಗಿಬಿಟ್ಟಿತು.'' *(ಅಲ್ಲೇ, ಪು. ೧೨೦-೨೧)*

ಜೀವಿತೋದ್ದೇಶವು ಸಫಲವಾದ ಮೇಲೆ ದೇಹತ್ಯಾಗ ಮಾಡುವುದನ್ನು ಆತ್ಮಹತ್ಯೆ ಎಂದು ಕರೆಯಲಾಗುವುದಿಲ್ಲ. ಶ್ರೀರಮಣ ಮಹರ್ಷಿಗಳೊಡನೆ ಒಬ್ಬ ಯುವಕನು ಬಂದು ತನ್ನ ದುಗುಡವನ್ನು ಹೇಳಿಕೊಂಡು ತನಗೆ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸುತ್ತದೆ ಎಂದು ಸಂಕಟಪೂರಿತ ಧ್ವನಿಯಿಂದ ಅರುಹಿಕೊಂಡನು. ರಮಣ ಮಹರ್ಷಿಗಳು ಊಟದ ಎಲೆಯನ್ನು ಹೆಣೆಯುತ್ತ ಕುಳಿತಿದ್ದರು: ''ನೋಡು, ನಾನು ಹೆಣೆಯುತ್ತಿರುವ ಈ ಊಟದ ಎಲೆಗೆ ಒಂದು ಉದ್ದೇಶವಿದೆ. ಊಟ ಮಾಡುವುದಕ್ಕೆ ಅದಿರುವುದು, ಊಟವಾದ ಮೇಲೆ ಅದನ್ನು ಎಸೆಯಬಹುದು. ಅದಕ್ಕೆ ಮುಂಚೆಯೇ ಅದನ್ನು ನಾಶಮಾಡಿದರೆ ಹೇಗೆ? ನನ್ನ ಶ್ರಮವೆಲ್ಲ ವ್ಯರ್ಥವಾಗುತ್ತದೆ. ಊಟ ಮುಗಿದ ಮೇಲೆ ಅದು ತನ್ನ ಸಾರ್ಥಕತೆಯನ್ನು ಪಡೆಯುತ್ತದೆ. ಹಾಗೆಯೇ ಈ ದೇಹಕ್ಕೂ ಒಂದು ಉದ್ದೇಶವಿದೆ, ಅದು ಸಾರ್ಥಕವಾದ ಮೇಲೆ ಅದನ್ನು ನಾಶಮಾಡಬಹುದು, ಅಥವಾ ತಾನಾಗಿಯೇ ನಾಶವಾಗಬಹುದು.''

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಎರಡು ಪ್ರವೃತ್ತಿಗಳಿರುತ್ತವೆ ಎಂದು ಹೇಳುತ್ತಾರೆ: ಜೀವಿಸಿರಬೇಕೆಂಬ ಇಚ್ಛೆ (ಜಿಜೀವಿಷುತ್ವ) ಮತ್ತು ಸಾಯಬೇಕೆಂಬ ಇಚ್ಛೆ (ಮುಮೂರ್ಷುತ್ವ). ಇದಕ್ಕೆ ಸಂಬಂಧಪಟ್ಟ ಒಂದು ಹಾಸ್ಯಪ್ರಸಂಗ: ಒಮ್ಮೆ ಒಬ್ಬ ವ್ಯಕ್ತಿಯು ಜೀವನದಲ್ಲಿ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಹೊರಟನು. ತನ್ನ ಘನ ಉದ್ದೇಶದ ಸಫಲತೆಗೆ ಅವನು ರೈಲುಹಳಿಯನ್ನು ಆರಿಸಿಕೊಂಡನು. ಅವನ ಕೈಯಲ್ಲಿ ಒಂದು ಚೀಲ. ದಾರಿಯಲ್ಲಿ ಯಾರೋ ಕೇಳಿದರು, ''ಸ್ವಾಮಿ, ಎಲ್ಲಿಗೆ ಹೋಗುತ್ತಿದ್ದೀರಿ?'' ಎಂದು. ''ರೈಲು ಚಕ್ರದ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಹೋಗುತ್ತಿದ್ದೇನೆ.'' ''ಆ ಬ್ಯಾಗಿನಲ್ಲಿ ಏನಿದೆ?'' ಉತ್ತರ: ''ರೈಲು ಯಾವಾಗಲೂ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಹಸಿವಾದರೆ ಏನಾದರೂ ತಿನ್ನಲು ಊಟದ ಬುತ್ತಿ ತೆಗೆದುಕೊಂಡು ಹೋಗುತ್ತಿದ್ದೇನೆ!'' ಇಲ್ಲಿ ನಾವು ಎರಡೂ ಪ್ರವೃತ್ತಿಗಳು ಕೆಲಸ ಮಾಡುತ್ತಿರುವುದನ್ನು ನೋಡುತ್ತೇವೆ.

ಆತ್ಮಹತ್ಯೆಗೆ ಅನೇಕ ಕಾರಣಗಳನ್ನು ಊಹಿಸಬಹುದು:

೧. ಸಂಬಂಧದ ತುಡಿತ : ವ್ಯಕ್ತಿಗಳೊಡನೆಯಾಗಲಿ, ಸಂಸ್ಥೆಯೊಡನೆಯಾಗಲಿ, ಅರ್ಥಪೂರ್ಣ ಸಂಬಂಧವಿಲ್ಲದಾಗ ಆತ್ಮಹತ್ಯೆಯ ಯೋಚನೆ ಬರುತ್ತದೆ. ಮಹಾಭಾರತದ ಕರ್ಣನ ಉದಾಹರಣೆಯನ್ನು ನೋಡಿದರೆ, ಒಳ್ಳೆಯವರೊಡನೆ ಸಂಬಂಧ ಸಾಧ್ಯವಾಗದಿದ್ದರೆ ಕೆಟ್ಟವರೊಡನೆಯಾದರೂ ಸಂಬಂಧ ಬೆಳೆಸುತ್ತಾರೆ.

೨. ಜೀವನದ ಅರ್ಥ ಕಾಣದಿದ್ದಾಗಲೂ ಏಕೆ ಬದುಕಿರಬೇಕೆನಿಸುತ್ತದೆ. ಈ ಅರ್ಥೇಚ್ಛೆಯನ್ನು ಅದುಮಿಟ್ಟರೆ ಅದು ಅಧಿಕಾರಲಾಲಸೆಯಾಗಿಯೂ ಇಂದ್ರಿಯಲೋಲುಪತೆಯಾಗಿಯೂ ವ್ಯಕ್ತವಾಗುತ್ತದೆಯೆಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ. ಉನ್ನತ ಆದರ್ಶವನ್ನು ಇಟ್ಟುಕೊಂಡು ಅದನ್ನು ಸಾಧಿಸುವುದರಲ್ಲಿ ಜೀವನದ ಅರ್ಥವನ್ನು ಕಾಣಬೇಕು. ಇಲ್ಲದಿದ್ದರೆ ಅನೇಕ ರೂಪಗಳಲ್ಲಿ ಈ ಜೀವನವನ್ನು ವ್ಯರ್ಥಗೊಳಿಸುತ್ತೇವೆ. ಅವುಗಳಲ್ಲಿ ಆತ್ಮಹತ್ಯೆಯೂ ಒಂದು ಬಗೆ.